ಮಂಜುನಾಥ ಎಸ್., ಗುಂಜೂರು
*ಭಗವದ್ಗೀತೆಯಂತೆ ಮಹಾಭಾರತ, ರಾಮಾಯಣಗಳ ಮೇಲೆ ಏಕೆ ಪ್ರಮಾಣ ಮಾಡುವುದಿಲ್ಲ?*



ಭಗವದ್ಗೀತೆ ಮಾತ್ರ ವಾದ-ಪ್ರತಿವಾದ-ಕ್ರಾಸ್ ಎಕ್ಸಾಮಿನೇಶನ್ ರೀತಿಯಲ್ಲಿ ಇರುವುದರಿಂದ.

ಕೃಷ್ಣಪ್ರಸಾದ್, ಬೆಂಗಳೂರು
*ಸಿಹಿತಿಂಡಿಗಳನ್ನು ಚೆನ್ನಾಗಿ ತಿನ್ನುವವರು ಕಾಫಿ ಮಾತ್ರ ಶುಗರ್‌ಲೆಸ್ ಎನ್ನುವರಲ್ಲ ಗುರುವೆ...?*
ಅವರದು ಲಿಕ್ವಿಡ್ ಡಯಟ್; ಅಂದರೆ ಲಿಕ್ವಿಡ್‌ನಲ್ಲಿ ಮಾತ್ರ ಡಯಟ್.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ತಂದೆತಾಯಿಯರು ಮಕ್ಕಳಿಗೆ ಬಯ್ಯುವಾಗ ಕತ್ತೆ, ನಾಯಿ, ಕೋತಿ ಎನ್ನುತ್ತಾರೆ; ಜಿಂಕೆ, ಗಿಳಿ, ಎಂದೆಲ್ಲ ಏಕೆ ಬೈಯಲ್ಲ?*
ಆ ಬೈಗಳು 'ಗಂಡ ಬಂದ ತಕ್ಷಣ ಜಿಂಕೆ ಹಾಗೆ ಓಡ್ತಾಳೆ, ಮಾತ್ನೋಡು... ಅಹಹಹ; ಅರಗಿಣಿ!' ಎನ್ನುವ ಅತ್ತೆಯ ಆಸ್ತಿ!

ಎಸ್.ಎ. ಮೋಹನರಾಜು, ಶಿವಮೊಗ್ಗ
*ಹನಿಹನಿ ಪ್ರೇಮ್ ಕಹಾನಿ. ಮನಿ ಮನಿ ಯಾವ ಕಹಾನಿ ರಾಮ್‌ಜೀ?*




ಹಣದಾಸೆಗೆ ಹಗರಣ ಮಾಡಿ ಸ್ಲೇಟ್ ಹಿಡಿಸಿಕೊಂಡ 'ಫ್ರೇಂ ಕಹಾನಿ'

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಐಸ್‌ಕ್ರೀಂಗೂ, ಹೆಣ್ಣಿಗೂ ಏನು ವ್ಯತ್ಯಾಸ?*
ಐಸ್‌ಕ್ರೀಂನಲ್ಲಿ ಕುಲ್ಫೀ ಚೆಂದ; ಹೆಣ್ಣಿನೊಡನೆ ಸೆಲ್ಫೀ ಚೆಂದ.

ಕೃಷ್ಣಮೂರ್ತಿ ಎಸ್, ಬೆಂಗಳೂರು
*ಒಂದು ಕುಟುಂಬದಲ್ಲಿ ಏಳು ಜನ ಸದಸ್ಯರಿದ್ದರೆ ಆ ಕುಟುಂಬ ಏಳಿಗೆಯಾಗುವುದಿಲ್ಲವಂತೆ. ಹೌದೆ?*
ಏಳು ಸದಸ್ಯರಲ್ಲ, ಏಳದ ಸದಸ್ಯರಿದ್ದರೆ ಮಾತ್ರ ಏಳಿಗೆ ಇಲ್ಲ.

ಮಲ್ಲನಗೌಡ ಗಂ. ಪಾಟೀಲ, ರಾಮದುರ್ಗ
*ವಧುವಿಗೂ, ವಿಧವೆಗೂ ವ್ಯತ್ಯಾಸವೇನು?*
ವಧು ತೋಟದ ಗುಲಾಬಿ; ವಿಧವೆ ದೇಗುಲದ ವಿಗ್ರಹದಿಂದ ಕೆಳಗುರುಳಿದ ಗುಲಾಬಿ.

ಅಮರಯ್ಯಾ ಪತ್ರಿಮಠ, ಸುರಪೂರ
*ಅಂದು ನುಡಿದಂತೆ ನಡೆದರು. ಇಂದು ನುಡಿದು ನಡೆಯರು. ಮುಂದೆ?*
ಕುಡಿದಂತೆ ನಡೆಯುವರು, ಕುಡಿದು ನುಡಿಯುವರು.

ಜಾಕೋಬ್ ಡಿಸೋಜ, ಕುರುವಳ್ಳಿ
*ಜೀವವಿದ್ದ ಶವದಂತೆ ಎಂದರೆ ಏನು?*
ನರ್ಸಿಂಗ್ ಹೋಂನ ಬಿಲ್ ಇಂಶೂರೆನ್ಸ್ ಮೊತ್ತ ಮುಟ್ಟಿದ ತಕ್ಷಣ ಗೊಟಕ್ ಎನ್ನುವ ರೋಗಿ.

ಮಹಾಬಲರಾವ್, ಎನ್ನಾರ್ ಪುರ
*ಪೌರಾಣಿಕ ನಾಟಕದಲ್ಲಿ ದ್ವಂದ್ವಾರ್ಥ ಇಲ್ಲವೆ?*
ಪೌರನಾಗಿ ನೋಡಿದರೆ ಇಲ್ಲ; ಪೋರನಾಗಿ ನೋಡಿದರೆ ಇದೆ.

ಸುಂದರ್, ಬೆಂಗಳೂರು
*ಜೀವವಿರುವವರೆಗೆ ಜೀವನ ವರ್ಣಮಯ. ಜೀವ ಹೋದಮೇಲೆ?*
ಮಾಮೂಲಾಗಿ ಸತ್ತರೆ ಏನೇನೂ ಪ್ರಯೋಜನವಿಲ್ಲ. ಕೊಲೆಯಾದರೆ ಸಖತ್ ವರ್ಣಮಯ!

ರಮೇಶ ಬೊಂಗಾಳೆ, ಬೈಲಹೊಂಗಲ
*ದೇವಸ್ಥಾನಗಳಲ್ಲಿ ಗಂಟೆಗಳೇ ಇಲ್ಲದಿದ್ದರೆ ಏನಾಗುತ್ತಿತ್ತು ಸಾರ್?*
ಶಂಖ ಹೊಡ್ಯೊಕ್ಕೆ ಅಂತಾನೇ ಜನರನ್ನ ನೇಮಿಸ್ತಿದ್ರು.

ಶೋಭಾ ಶ್ರೀಪತಿ, ಹೊಳೆನರಸಿಪುರ
*ಹಿಂದೆ ಸತ್ಯವಂತರನ್ನು ಹರಿಶ್ಚಂದ್ರ ಎನ್ನುತ್ತಿದ್ದರು. ಈಗ?*
ಬಾಳಿ ಬದುಕಕ್ಕೆ ಬರದೇಯಿರೋ ಬಕ್ರಾ.

ಸಂತೆಬೆನ್ನೂರು ಫೈಜ್ನಟ್ರಾಜ್, ದಾವಣಗೆರೆ
*ಸತ್ತರೂ ಸುಳ್ಳು ಹೇಳಲಾರೆ ಎನ್ನುವ ವ್ಯಕ್ತಿಗಳ ಮರ್ಮವೇನು ಸಾರ್?*
ಸುಳ್ಳಿಗೆ ಅತ್ಯಗತ್ಯವಾದ ಕ್ರಿಯೇಟಿವಿಟಿಯ ಅಭಾವ.

## ಬಹುಮಾನಿತ ಪ್ರಶ್ನೆ

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಪ್ರೇಮಿಗಳು ಲವ್ ಮಾಡಲು ಪಾರ್ಕನ್ನೇ ಏಕೆ ಹುಡುಕುತ್ತಾರೆ?*
ಮಾಲ್/ಸಿನೆಮಾ ಖರ್ಚಿಗಿಂತ ಮಾಲಿ/ಸೆಕ್ಯುರಿಟಿಯವನ ರೇಟ್ ಕಡಿಮೆಯಾದ್ದರಿಂದ.

ಎಚ್.ಆರ್.ದೇಸಾಯಿ, ರಾಯಚೂರು
*ಸಂಸಾರದಲ್ಲಿ ಬುಗುರಿ ಯಾರು, ಚಾಟಿ ಯಾರು?*
ಘಾಟಿಯೇ ಚಾಟಿ; ಗುರಿಯಿಲ್ಲದವರ ಬುಗುರಿ.

ಎನ್. ಗೋಪಾಲರಾವ್, ಬೆಂಗಳೂರು
*ಲವ-ಕುಶರ ತಂದೆಯಾದ ರಾಮನಿಗೆ ಹೆಂಡತಿಯ ಹೆರಿಗೆ ಖರ್ಚಿನ ಬಿಲ್ ಎಷ್ಟು ಬಂದಿತ್ತು?*
ಕುತ್ತಿಗೆಗೆ ಬರುವಷ್ಟು – ಜಪ್ತಿ ಮಾಡಿ ಕುದುರೆ ಕಟ್ಟಿ ವಸೂಲಿ ಮಾಡಿದರಂತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ಸಂತಸವನ್ನು ಎಲ್ಲರಿಗೂ ಹಂಚಿ; ದುಃಖವನ್ನು ನಿಮ್ಮೊಳಗೇ ಇಟ್ಟುಕೊಳ್ಳಿ ಎನ್ನುವುದೇಕೆ?*



ತಪ್ಪು ಮಾತು! ದುಃಖವನ್ನು ಕಂತಿನಲ್ಲಿ ಬರೆದು ಮಾರಿ. ಸೀರಿಯಲ್ ನಿರ್ಮಾಪಕರು ಮುಗಿಬಿದ್ದು ಕೊಳ್ಳುತ್ತಾರೆ.

ಎಚ್. ಆನಂದ್ ಕುಮಾರ್, ಚಿತ್ರದುರ್ಗ
*ಕೆಲವರಷ್ಟೇ ಪ್ರಶ್ನಾ ಸ್ನೇಹಿತರು ನಿಮಗೆ ಪಕ್ಕಾ; ಹಲವರು ಕಸದ ಡಬ್ಬಿ ಕಡೆಗೆ. ಕರೆಕ್ಟ್ ತಾನೆ?*
ಹಾಗೇನಿಲ್ಲ. ನನ್ನನ್ನು ಕಂಡರಾಗದವರಿಗೂ ಉತ್ತರಿಸುತ್ತೇನೆ ಎನ್ನುವುದಕ್ಕೆ ಈ ಉತ್ತರವೇ ಸಾಕ್ಷಿ.

ಪಿ.ಎನ್. ಶ್ರೀವತ್ಸ, ಬೆಂಗಳೂರು
*ದೇವರು ಸಮುದ್ರದ ಮೇಲೆ ಮಳೆ ಸುರಿಸುವ ಬದಲು ಭೂಮಿಯ ಮೇಲೆಯೇ ಸುರಿಸಬಹುದಿತ್ತಲ್ಲವೇ?*
'ಬಿಸಿಲಿನ ಶಾಖಕ್ಕೆ ನೀರು ಆವಿಯಾಗಿ ಉಪ್ಪು ಜಾಸ್ತಿಯಾಗಿದೆ. ರುಚಿಗೆ ತಕ್ಕಷ್ಟು ನೀರು ಸುರಿಸು' ಎಂದು ಸಮುದ್ರರಾಜ ಬೇಡುವನಂತಲ್ಲ!

■ ರಾಮ್